ಒಎಸ್ 36/2019
ಡಿಡಬ್ಲ್ಯೂ 2

<u>ದಿನಾಂಕಃ 07-10-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು</u>

**<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ-</u>**

ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಸಂಗತಿಗಳು ಗೊತ್ತಿವೆ. ವಾದಿಗಳು ದಾವೆಯಲ್ಲಿ ಕೇಳಿರುವ ಪರಿಹಾರದ ಬಗ್ಗೆ ಕೂಡಾ ಬಗ್ಗೆ ಮಾಹಿತಿ ಇದೆ. ಪ್ರತಿವಾದಿಗಳು ಹಾಕಿರುವ ತಕರಾರಿನ ಬಗ್ಗೆ ಕೂಡಾ ನನಗೆ ಮಾಹಿತಿ ಇದೆ. ವಾದಿ ಚಂದ್ರಮ್ಮ ನನ್ನ ದೊಡ್ಡಮ್ಮ ಎಂದರೆ ಸರಿ. ಅವರಿಗೆ ಒಬ್ಬ ಮಗ ಇದ್ದ ಎಂದರೆ ಸರಿ. ಅವರು ಅಪಘಾತದಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿ. ನನ್ನ ದೊಡ್ಡಮ್ಮ ಬದುಕಿದ್ದಾಗಲೇ ನನ್ನ ತಂದೆ ನನ್ನ ತಾಯಿಯನ್ನು ಮದುವೆ ಆದರು ಎಂದರೆ ಸರಿ. ನನ್ನ ತಾಯಿಯ ಮದುವೆಗೂ ಮುಂಚೆ ಕುಟುಂಬದಲ್ಲಿ ಆಗಿರುವ ಘಟನೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ತಂದೆ ನನಗೆ ಹೇಳಿರುವ ಪ್ರಕಾರ ವಾದಿ ಚಂದ್ರಮ್ಮ ಕೇವಲ 5-6 ವರ್ಷ ಸಂಸಾರ ಮಾಡಿ ನಮ್ಮ ತಂದೆಯಿಂದ ಬೇರೆ ಹೋಗಿದ್ದಾರೆ. ಈಗ ಅವರು ತಮ್ಮ ತವರು ಮನೆಯಲ್ಲಿ ವಾಸ ಇದ್ದಾರೆ ಎಂದರೆ ಸರಿ.

ಮೊದಲನೇ ಪ್ರತಿವಾದಿ ಗಿರಿಯಪ್ಪ ನನ್ನ ಅಜ್ಜ ಎಂದರೆ ಸರಿ. ಮುಂಚೆ ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಈಗಾಗಲೇ ಭಾಗ ಆಗಿದೆ ಎಂದು ಹೇಳುತ್ತಾರೆ. ನನ್ನ ಅಜ್ಜ ಅಂದರೆ ಒಂದನೇ ಪ್ರತಿವಾದಿ ತನ್ನ ಎಲ್ಲಾ ಮಕ್ಕಳಿಗೆ ಬಾಯಿ ಮಾತಿನ ಮೂಲಕ ಆಸ್ತಿಗಳನ್ನು ಹಂಚಿಕೊಟ್ಟಿದ್ದಾರೆ. ಸದರಿ ವಿಭಾಗ ಹಿರಿಯರ ಸಮಕ್ಷಮದಲ್ಲಿ ಆಗಿದೆ. ಈ ಬಗ್ಗೆ ನಾನು ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ವಾದಿಗೆ ನಮ್ಮ ತಂದೆ 2013 ನೇ ಸಾಲಿನಲ್ಲಿ ಪಂಚಾಯತಿ ಸಮಕ್ಷಮ ಕೊಟ್ಟಿರುವ 2 ಲಕ್ಷ ರೂ. ಹಣಕ್ಕೆ ದಾಖಲೆಗಳು ಇವೆ. ಅದು ಊರಿನ ಹಿರಿಯ ಬಳಿ ಇದೆ. ನಮ್ಮ ಊರಿನ ಗೌಡರಾದ ಶಾಂತಪ್ಪ ಇವರ ಬಳಿ ಇದೆ. ಅವರು ನಾನು ಕೇಳಿದರೆ ಕೊಡುತ್ತಿಲ್ಲ. ಈಗ ನನ್ನ ಬಳಿ ಆ ರೀತಿ ಯಾವುದೇ ದಾಖಲೆಗಳು ಇಲ್ಲ. ಈ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿ ಯಾವುದೇ ಪಂಚಾಯತಿ ಆಗಿಲ್ಲ, ವಾದಿಗೆ ನನ್ನ ತಂದೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆಯಿಂದ ದೂರ ಹೋದ ನಂತರ ಮತ್ತು ನನ್ನ ತಾಯಿಯನ್ನು ನನ್ನ ತಂದೆ ಎರಡನೇ ಮದುವೆ ಮಾಡಿಕೊಂಡ ನಂತರ ವಾದಿ ನಮ್ಮ ಕುಟುಂಬದೊಂದಿಗೆ ಎಂದಿಗೂ ವಾಸ ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದ ನನ್ನ ಮದುವೆ ಕಾಲದಲ್ಲಿ ಬೆಂಗಳೂರಿನಲ್ಲಿ ನನ್ನ ಜೊತೆ ಇದ್ದರು ಎಂದು ಹೇಳುತ್ತಾರೆ. ಬೆಂಗಳೂರಿನಲ್ಲಿ ನನ್ನ ದೊಡ್ಡಮ್ಮನ ಜೊತೆ ಸ್ವಂತ ಮನೆಯಲ್ಲಿ ಇದೆ. ಮನೆಯ ದಾಖಲೆಗಳನ್ನು ಬೇಕು ಎಂದಾದರೆ ಕೊಡುತ್ತೇನೆ. ವಾದಿಯ ಸ್ವಂತ ಮಗ ಕೆಲಸದಲ್ಲಿ ಇದ್ದರು ಎಂದರೆ

ಸರಿ. ಅವರು ಸಿವಿಲ್ ಇಂಜಿನೀಯರ್ ಆಗಿ ಓಮನ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೆ 2-3 ಲಕ್ಷ ರೂ.ಗಳ ಸಂಬಳ ಬರುತ್ತಿತ್ತು ಎಂದರೆ ಸರಿಯಲ್ಲ. 1 ಲಕ್ಷ ರೂ.ದವರೆಗೆ ಬರುತ್ತಿತು. ಆ ಬಗ್ಗೆ ನನಗೆ ವೈಯಕ್ತಿವಾಗಿ ಮಾಹಿತಿ ಇದೆ. ನನ್ನ ದೊಡ್ಡಮ್ಮ ಮತ್ತು ಆಕೆಯ ಮಗ ಯಾವಾಗಲೂ ನಮ್ಮ ಸಂಪರ್ಕದಲ್ಲಿ ಇಲ್ಲದ ಕಾರಣ ಅವರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. ಬೀರೂರಿನ ನಿವೇಶನಗಳನ್ನು ನಮ್ಮ ತಂದೆ ನನ್ನ ಮೃತ ಅಣ್ಣನಿಗೆ ಕೊಡಿಸಿದ್ದರು. ನಾನು ಖರೀದಿ ವ್ಯವಹಾರ ಮತ್ತು ನೊಂದಣಿ ಕಾಲಕ್ಕೆ ಹಾಜರಿರಲಿಲ್ಲ. ನನ್ನ ತಂದೆ ಸದರಿ ಆಸ್ತಿಗಳ ಖರೀದಿಗೆ ಯಾವುದೇ ರೀತಿಯ ಹಣಕಾಸಿನ ಸಹಾಯ ಮಾಡಿಲ್ಲ ಎಂದರೆ ಸರಿಯಲ್ಲ.

ಕಡೂರಿನ ನ್ಯಾಯಾಲಯದಲ್ಲಿ ಮೇಲೆ ಹೇಳಿದ ಎರಡೂ ಆಸ್ತಿಗಳಲ್ಲಿ ನನಗೆ ಭಾಗ ಬರಬೇಕು ಎಂದು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ವಾದಿ ನಮ್ಮ ತಂದೆಯ ಕಾನೂನು ಬದ್ಧ ಹೆಂಡತಿ ಆಗಿರುವ ಕಾರಣ ಕಾಯ್ದೆ ಪ್ರಕಾರ ಸರ್ವೆ ನಂಬರ 22/5 ಅವರ ಹೆಸರಿಗೆ ಪೌತಿ ಖಾತೆ ಆಗಿದೆ ಎಂದರೆ ಸಾಕ್ಷಿಯು ನಮ್ಮ ಗಮನಕ್ಕೆ ಬಾರದೇ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಎಸಿ ಕಛೇರಿಯಲ್ಲಿ ನಾವು ಅಪೀಲು ಸಲ್ಲಿಸಿದ್ದೇವೆ, ಸಿವಿಲ್ ಪ್ರಕರಣ ಮುಗಿಯುವರೆಗೂ ಸ್ಟೇ ಕೊಟ್ಟಿದ್ದಾರೆ. ಸದರಿ ಆದೇಶದ ನಕಲನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇವೆ. ದಾವಾ ಆಸ್ತಿಗಳಲ್ಲಿ ನನ್ನ ತಂದೆಗೆ ಬರುವ ಹಿಸ್ಸೆಯಲ್ಲಿ ನನಗೆ ಮತ್ತು ವಾದಿಗೆ ಸಮಾನ ಹಕ್ಕು ಇದೆ ಎಂದರೆ ಸರಿ. ಅಸೆಸ್‌ಮೆಂಟ್ ನಂಬರ 4121/3985 ಮತ್ತು 4122/3986 ಆಸ್ತಿಗಳು ವಾದಿಯ ಮಗನ ಸ್ವಂತ ಆಸ್ತಿಗಳು ಇದ್ದು ಆತನ ಮರಣಾ ನಂತರ ವಾದಿಯ ಹೆಸರಿಗೆ ಖಾತೆ ಬದಲಾವಣೆ ಆಗಿವೆ ಎಂದರೆ ಸರಿಯಲ್ಲ. ವಾದಿ ಕುಟುಂಬ ಅಡಚಣೆಗಾಗಿ ಸದರಿ ಆಸ್ತಿಗಳನ್ನು ತಮ್ಮ ತಮ್ಮನಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನನಗೆ ಸದರಿ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರತಿವಾದಿ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆ:**</u> ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಒ**

**Sd/-**

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***